


■ ಗೀತಾ ಸೀತಾರಾಮ್

# ರವಿವರ್ಮ ಕುಂಚದಲ್ಲಿ ‘ಸುಗಂಧ’

ನಾವಿನ್ನೇನು ಸಾರೋಟನ್ನು ಹತ್ತಬೇಕು ಎನ್ನುವಷ್ಟರಲ್ಲಿ ಆ ತರುಣ ಓಡುತ್ತಾ ಬಂದು ನನ್ನ ಬಳಿ ನಿಂತ. ‘ತಮ್ಮೊಂದಿಗೆ ಎರಡು ನಿಮಿಷ ಮಾತನಾಡಬೇಕಿತ್ತು.’

‘ಆಗುಂತಕರೊಂದಿಗೆ ಮಾತನಾಡುವ ಅಭ್ಯಾಸ ನನಗಿಲ್ಲ’

‘ನಾನು ನಿಮ್ಮನ್ನು ನಿತ್ಯವೂ ನೋಡುತ್ತಿದ್ದದನ್ನು ನಿಮ್ಮ ದಾಸಿ ತಪ್ಪಾಗಿ ಭಾವಿಸಿದರು. ನಾನಾವ ಕೆಟ್ಟದೃಷ್ಟಿಯಿಂದಲೂ ಹಾಗೆ ನೋಡಲಿಲ್ಲ. ನಾನೊಬ್ಬ ಚಿತ್ರಕಲಾವಿದ. ನಿಮ್ಮ ಅನುಪಮ ಸೌಂದರ್ಯವನ್ನು ಆರಾಧಿಸುತ್ತಿದ್ದೇನಷ್ಟೆ.’

‘ಇದನ್ನು ನಂಬಬೇಕೇ?’

‘ಒಂದು ನಿಮಿಷ ಇರಿ. ನಾನು ನಿಮಗೊಂದು ವಸ್ತು ತಲುಪಿಸಬೇಕು. ಪಾಚನ್… ಆ ಸಾರೋಟಿನಲ್ಲಿರುವುದನ್ನು ತೆಗೆದುಕೊಂಡು ಬಾ’ ಅವನ ಸಾರೋಟಿನಲ್ಲಿದ್ದ ಸುರುಳಿಯೊಂದನ್ನು ಪಾಚನ್ ತಂದಿತ್ತ. ಅವನು ಅದನ್ನು ನನ್ನ ಕೈಗಿಟ್ಟು ‘ಬಿಚ್ಚಿ ನೋಡಿ’ ಎಂದ. ನಾನು ಕುತೂಹಲದಿಂದ ಬಿಚ್ಚಿ ನೋಡಿದೆ. ನನ್ನದೇ ತೈಲಚಿತ್ರ! ಅಚ್ಚರಿಯಿಂದ ಚಿತ್ರವನ್ನೊಮ್ಮೆ, ಅವನನ್ನೊಮ್ಮೆ ನೋಡತೊಡಗಿದೆ. ಅವನು ಹೇಳಿದ ‘ನೋಡಿ, ಈ ದಿನ ನೀವು ಸುಂದರ ತರುಣಿಯಾಗಿದ್ದೀರಿ. ಈ ನಿಮ್ಮ ಚರ್ಮದ ಸೌಂದರ್ಯ, ಕಣ್ಣಿನ ಕಾಂತಿ, ಕದಪುಗಳ ಕೆಂಪು, ವಯಸ್ಸಾದಂತೆಲ್ಲ ಕಮ್ಮಿಯಾಗಿ, ಚರ್ಮ ಸುಕ್ಕುಗಟ್ಟಿ ಹೇಳ ಹೆಸರಿಲ್ಲದಂತೆ ಆಗಬಹುದು. ನೀವಿಷ್ಟು ಸುಂದರವಾಗಿದ್ದಿರಿ ಎಂಬುದೇ ಮರೆತುಹೋದಂತಾಗಬಹುದು. ಆಗ ಈ ತೈಲಚಿತ್ರ ನಿಮಗೆ ಬದುಕುವ ಆಸೆಯನ್ನು ಮೂಡಿಸುತ್ತದೆ. ಮೂರು ದಿನಗಳಿಂದ ನಿಮ್ಮನ್ನು ನೋಡಿ ಮನೆಗೆ ಹೋಗಿ ನಿಮ್ಮ ಚಿತ್ರವನ್ನು ಪೂರೈಸುತ್ತಿದ್ದೆ, ನಿಮ್ಮ ಅನುಮತಿಯಿಲ್ಲದೆಯೇ ಹೀಗೆ ಮಾಡಿದ್ದಕ್ಕೆ



ರಾಜಾ ರವಿವರ್ಮನ ಕಲ್ಪನೆಯಲ್ಲಿ ಮೋಹಿನಿ–ರುಕ್ಮಾಂಗದ
ಕಲಾಕೃತಿ ಕೃಪೆ: ‘ಪರಸರಾಮ್ ಮಂಘಾರಾಮ್’ ಪ್ರಕಾಶನದ ‘ರಾಜಾ ರವಿವರ್ಮ: ದಿ ಪೈಂಟರ್ ಪ್ರಿನ್ಸ್’